<u>ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ; ನ್ಯಾಯಾಲಯ,</u>
<u>ಶ್ರೀರಂಗಪಟ್ಟಣ.</u> DW-1
ಸಾಕ್ಷಿಗೆ ಪ್ರಮಾಣ ವಚನ ಮಾಡಲಾದ ದಿ : 31.05.2024
ಪಾಟಿ ಸವಾಲು : ವಾದಿ ಪರ ವಕೀಲರಿಂದ

ದಿಃ 05.06.1989 ರಲ್ಲಿ ಆಗಿರುವ ಮೂರು ವಿಲ್ ಗಳ ನಂತರ ಬೇರೆ ಯಾವುದಾದರೂ ವಿಲ್ ಆಗಿದೆಯೇ ಎಂದು ನಿಮ್ಮ ತಂದೆಯವರು ಸಾಯುವ ಪೂರ್ವದಲ್ಲಿ ನೀವು ಏನಾದರೂ ವಿಚಾರ ಮಾಡಿರುತ್ತೀರಾ ಎಂಬ ಪ್ರಶ್ನೆಗೆ ಸಾಕ್ಷಿಯು ನನಗೆ ಗೊತ್ತಿಲ್ಲವೆಂದು ನುಡಿಯುತ್ತಾರೆ. ನನ್ನ ತಂದೆಯವರು ತೀರಿಕೊಂಡ ನಂತರ ಬೇರೆ ಯಾವುದಾದರೂ ವಿಲ್ ಮಾಡಿರುವ ಬಗ್ಗೆ ನೀವು ವಿಚಾರ ಮಾಡಿರುತ್ತೀರಾ ಎಂಬ ಪ್ರಶ್ನೆಗೆ ಸಾಕ್ಷಿಯು ವಿಚಾರ ಮಾಡಿರುವುದಿಲ್ಲ ಹಾಗೂ ನನಗೆಗೊತ್ತಿಲ್ಲವೆಂದು ನುಡಿಯುತ್ತಾರೆ.

ನನ್ನ ತಂದೆಯವರು ಸಾಯುವ ಒಂದು ವರ್ಷ ಪೂರ್ವದಲ್ಲಿ ಅವರು ಕಣ್ಣಿಗೆ ಕನ್ನಡಕವನ್ನು ಹಾಕಿಕೊಳ್ಳುತ್ತಿದ್ದರು ಮತ್ತು ಅವರಿಗೆ ಓಡಾಡಲು ಆಗುತ್ತಿರಲಿಲ್ಲವೆಂಬ ಪ್ರಶ್ನೆಗೆ ಸಾಕ್ಷಿಯು ಕನ್ನಡಕವನ್ನು ಹಾಕಿಕೊಳ್ಳುತ್ತಿರಲಿಲ್ಲ ಹಾಗೂ ಓಡಾಡುತ್ತಿದ್ದರು ಎಂದು ನುಡಿಯುತ್ತಾರೆ. ಶ್ರೀರಂಗಪಟ್ಟಣದ ಸುತ್ತಮುತ್ತ ನಿಮ್ಮ ತಂದೆಯವರು ಯಾವ ರೀತಿ ಓಡಾಡುತ್ತಿದ್ದರು ಎಂಬ ಪ್ರಶ್ನೆಗೆ ಸಾಕ್ಷಿಯು ನಡೆದುಕೊಂಡು ಬರುತ್ತಿದ್ದರು ಹಾಗೂ ಬಸ್ಸಿನಲ್ಲಿ ಬರುತ್ತಿದ್ದರು ಎಂದು ನುಡಿಯುತ್ತಿದ್ದರು.

ನನ್ನ ತಂದೆಗೆ ಅವರ ವಯೋಮಾನದ ಸ್ನೇಹಿತರು ಇದ್ದರು ಎಂದರೆ ಸರಿ ಸಾಕ್ಷಿಯು ಮುಂದುವರೆದು ನನಗೆ ಗೊತ್ತಿಲ್ಲವೆಂದು ನುಡಿಯುತ್ತಾರೆ. ನನ್ನ ತಂದೆಯವರ ವಯೋಮಾನ ಇರುವವರ ಜೊತೆ ನನ್ನ ತಂದೆಯವರು ಚರ್ಚೆ ಮಾಡಿ ನಮ್ಮ ಕುಟುಂಬದ ಬಗ್ಗೆ ನಿರ್ಧಾರಗಳನ್ನು ತೆಗೆದುಕೊಳ್ಳುತ್ತಿದ್ದರುಎಂದರೆ ಸಾಕ್ಷಿಯು ನನಗೆ ಗೊತ್ತಿಲ್ಲವೆಂದು ನುಡಿಯುತ್ತಾರೆ. ನಮ್ಮ ಗ್ರಾಮದವರನ್ನು ಹೊರತುಪಡಿಸಿ ನನ್ನ ತಂದೆಯವರು ಬೇರೆ ಗ್ರಾಮಸ್ಥರ ಜೊತೆ ಚರ್ಚೆ ಮಾಡಿರುವ ಬಗ್ಗೆ ನನಗೆ ಮಾಹಿತಿ ಇರುವುದಿಲ್ಲ.

ನಿಮ್ಮ ತಂದೆಯವರು ಬದುಕಿದ್ದಾಗ ಅಥವಾ ಅವರು ತೀರಿಕೊಂಡ ನಂತರ ನೀವು ದಾವಾ ಸ್ವತ್ತುಗಳನ್ನು ಅಳತೆ ಮತ್ತು ಗಡಿಗುರುತು ಮಾಡಿಕೊಂಡಿರುತ್ತೀರಾ ಎಂಬ ಪ್ರಶ್ನೆಗೆ ಸಾಕ್ಷಿಯು ನನ್ನ ತಂದೆಯವರು ತೀರಿಕೊಂಡ ನಂತರ ದಾವಾ ಸ್ವತ್ತುಗಳನ್ನು ಅಳತೆ ಮತ್ತು ಗಡಿ ಗುರುತು ಮತ್ತು ವಿಭಾಗ ಮಾಡಿಕೊಂಡಿರುತ್ತೇವೆ ಎಂದು ನುಡಿಯುತ್ತಾರೆ. ಆ ರೀತಿ ಅಳತೆ ಗಡಿ ಗುರುತು ಮತ್ತು ವಿಭಾಗ ಮಾಡಿಕೊಂಡಿರುವ ಬಗ್ಗೆ ನನ್ನ ಬಳಿ ದಾಖಲೆ

ಇರುತ್ತದೆ. ಸದರಿ ದಾಖಲೆಯನ್ನು ನ್ಯಾಯಾಲಯಕ್ಕೆ ನೀಡಲು ನನಗೆ ಯಾವುದೇ ತೊಂದರೆ ಇರುವುದಿಲ್ಲ. ನನ್ನ ತಂದೆಯವರು ದಿಃ 05.06.1980 ರಂದು ಮೂರು ವಿಲ್ ಗಳನ್ನು ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ದಾವಾ ಸ್ವತ್ತುಗಳನು ಲಪಟಾಯಿಸುವ ಉದ್ದೇಶದಿಂದ ನಾನು ಮತ್ತು ಸಾಕ್ಷಿದಾರರು ಸೇರಿ ಸದರಿ ವಿಲ್ ಗಳನ್ನು ಸೃಷ್ಟಿಸಿರುತ್ತೇವೆ ಎಂದರೆ ಸರಿಯಲ್ಲ. ಸದರಿ ಮೂರುವಿಲ್ ಗಳಲ್ಲಿರುವ ಸಹಿ ನನ್ನ ತಂದೆಯದು ಎಂದರೆ ಸರಿಯಲ್ಲ. ವಿಲ್ ನಲ್ಲಿ ಸಾಕ್ಷಿದಾರರಾಗಿರುವ ಶಿವಪ್ರಕಾಶ್ ರವರು ನನ್ನ ಸ್ನೇಹಿತರು ಎಂದರೆ ಸರಿ. ಅವರು ವೃತ್ತಿಯಲ್ಲಿ ವಕೀಲರಾಗಿದ್ದು ನಾನು ಕೂಡ ವೃತ್ತಿಯಲ್ಲಿ ವಕೀಲನಾಗಿರುತ್ತೇನೆ ಎಂದರೆ ಸರಿ. ನಾನು ಮತ್ತು ಶಿವಪ್ರಕಾಶ್ ರವರು ಚಿಕ್ಕಂದಿನಿಂದಲೂ ಆತ್ಮೀಯ ಸ್ನೇಹಿತರು ಎಂದರೆ ಸಾಕ್ಷಿಯು 8ನೇ ತರಗತಿಯಿಂದ ಸ್ನೇಹಿತರು ಎಂದು ನುಡಿಯುತ್ತಾರೆ. ನನ್ನ ತಂದೆಯವರು ವಿಲ್ ಮಾಡಿದ ಸಂದರ್ಭದಲ್ಲಿ ಶಿವಪ್ರಕಾಶ್ ರವರಿಗೆ 20 ಕ್ಕಿಂತ ಹೆಚ್ಚು ವಯಸ್ಸು ಅಗಿತ್ತು. ವಿಲ್ ನ ಮತ್ತೊಬ್ಬ ಸಾಕ್ಷಿದಾರರಾದ ಮರಿಯಪ್ಪ ನನಗೆ ಪರಿಚಯವಿಲ್ಲ. ಪ್ರಸುತ್ತ ಮರಿಯಪ್ಪನವರು ಬದುಕಿದ್ದಾರೆ ಇಲ್ಲವೇ ಎಂದು ನನಗೆ ಗೊತ್ತಿಲ್ಲ. ಅದರ ಬಗ್ಗೆ ನಾನು ವಿಚಾರ ಮಾಡಿರುವುದಿಲ್ಲ. ನಿಮಗೆ ತಿಳಿದ ರೀತಿಯಲ್ಲಿ ಮರಿಯಪ್ಪ ಹಾಗೂ ನನ್ನ ತಂದೆಯವರಿಗೂ ಸಂಬಂಧ ಇತ್ತಾ ಎಂಬ ಪ್ರಶ್ನೆಗೆ ಸಾಕ್ಷಿಯು ಇಲ್ಲವೆಂದು ನುಡಿಯುತ್ತಾರೆ. ಮರಿಯಪ್ಪ ನನ್ನ ಸ್ನೇಹಿತರು ಇರುತ್ತಾರೆ ಎಂದರೆ ಸರಿಯಲ್ಲ. ನಾನು, ಮರಿಯಪ್ಪ, ಶಿವಪ್ರಕಾಶ್ ಎಲ್ಲಾ ಸೇರಿ ವಿಲ್ ಸೃಷ್ಟಿಸಿದ್ದೇವೆ ಎಂದರೆ ಸರಿಯಲ್ಲ.

ಮೂರು ವಿಲ್ ಗಳನ್ನು ನೀವು ಬೇರೆ ಯಾವುದಾದರೂ ಸರ್ಕಾರಿ ಕಛೇರಿಗಳಲ್ಲಿ ನೀಡಿರುತ್ತೀರಾ ಎಂಬ ಪ್ರಶ್ನೆಗೆ ಸಾಕ್ಷಿಯು ದಾವಾ ಸ್ವತ್ತುಗಳನ್ನು ಖಾತೆ ಮಾಡಿಸುವ ಸಂದರ್ಭದಲ್ಲಿ ತಹಶೀಲ್ದಾರ ಕಛೇರಿಗೆ ಮತ್ತು ಪಂಚಾಯಿತಿ ಕಛೇರಿಗೆ ನೀಡಿರುತ್ತೇನೆ ಎಂದು ನುಡಿಯುತ್ತಾರೆ. ಸದರಿ ವಿಲ್ ಗಳ ಆಧಾರದ ಮೇಲೆ ನಿಮ್ಮ ಹೆಸರಿಗೆ ದಾವಾ ಸ್ವತ್ತುಗಳು ಖಾತೆ ಆಗಿರುತ್ತದೆಯೇ ಎನ್ನುವ ಪ್ರಶ್ನೆಗೆ ಸಾಕ್ಷಿಯು ಹೌದು ಎಂದು ನುಡಿಯುತ್ತಾರೆ. ವಿಲ್ ಪ್ರಕಾರ ಖಾತೆ ಆಗಿರುವ ದಾಖಲೆಗಳನ್ನು ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ.

ಇವತ್ತಿಗೂ ಸಹ ದಾವಾ ಸ್ವತ್ತುಗಳು ವಾದಿ ಹಾಗೂ ಪ್ರತಿವಾದಿಯರ ಜಂಟಿ ಮಾಲೀಕತ್ವ ಹಾಗೂ ಜಂಟಿ ಸ್ವಾಧೀನಾನುಭವದಲ್ಲಿರುವ ಸ್ವತ್ತು ಎಂದರೆ ಸರಿಯಲ್ಲ.

ವಾದಿಯರ ಹಿಸ್ಸೆಗೆ ಧಕ್ಕೆ ತರುವ ಸಲುವಾಗಿ ಸುಳ್ಳು ದಾಖಲೆಗಳನ್ನು ಸೃಷ್ಟಿಸಿ ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

ನನ್ನ ಉಕ್ತಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಸಾ.ಓ.ಹೇ.ಸ.ಒ

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆಎಂಎಫ್‌ಸಿ., ಶ್ರೀರಂಗಪಟ್ಟಣ.